ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ.ಃ 1544/2022</u>

.....................................................................

CW 08
PW 02

| | | |
|---|---|---|
| ಹೆಸರು | ಃ | ಕಲ್ಲಪ್ಪ ಸುರಕೋಡ |
| ತಂದೆಯ ಹೆಸರು | ಃ | ಮನೋಹರ |
| ವಯಸ್ಸು | ಃ | 24 ವರ್ಷ |
| ಉದ್ಯೋಗ | ಃ | ಹೊಟೇಲ್ ಕೆಲಸ |
| ವಾಸಸ್ಥಳ | ಃ | ತೇರಗಾಂವ. |

ದಿನಾಂಕ 14-10-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u>** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1 ರಿಂದ 4 ಹಾಗೂ ಚಾಸಾ 9 ರವರು ಪರಿಚಯವಿದೆ. ಉಳಿದವರ ಪರಿಚಯ ಇಲ್ಲ. ಆರೋಪಿತನನ್ನು ನೊಡೀದ್ದೇನೆ, ಅಪಘಾತದ ಸಮಯದಲ್ಲಿ ಬಸ್ ಚಾಲಕ ಆಗಿದ್ದನು.

ದಿನಾಂಕ 13-10-2022 ರಂದ ಹಳಿಯಾಳದಿಂದ ಗುತ್ತಿಗೇರಿ ಹೋಗುವ ರಸ್ತೆಯಲ್ಲಿ ಅಪಘಾತ ಆಗಿತ್ತು. ನಾನು ಮತ್ತು ಆರೋಪಿ 2 ರವರು ನಮ್ಮ ಬೈಕ್ ನಲ್ಲಿ ಹೋಗುತ್ತಿದ್ದೇವು, ಆರೋಪಿತ ಹಿಂದಿನಿಂದ ಅತಿ ವೇಗವಾಗಿ ಬಂದು ನಮ್ಮ ಬೈಕಿಗೆ ಹಾಯಿಸಿದ. ನಾವು ಬೈಕ್ ನಿಂದ ಕೆಳಗೆ ಬಿದ್ದೆವು. ನನಗೆ ತಲೆಗೆ ಪೆಟ್ಟಾಗಿತ್ತು. ಆರೋಪಿ 2 ರವರ ಬಲಗೈ ಬಸ್ ನ ಚಕ್ರದಲ್ಲಿ ಸಿಲುಕಿತ್ತು. ನಂತರ ನಮ್ಮನ್ನು 108 ರಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನನಗೆ ಹಳಿಯಾಳ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದರು. ಆರೋಪಿ 2 ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಗೆ ಕರೆದುಕೊಂಡು ಹೋದರು. ನಾವು ಹೋಗುತ್ತಿದ್ದ ಬೈಕ್ ನ ನಂಬರ 0408 ಆಗಿತ್ತು. ಬಸ್ ನ ಸಂಖ್ಯೆ 2380 ಆಗಿತ್ತು. ಆರೋಪಿ 2 ರವರು ಬೈಕ್ ಅನ್ನು ಚಲಾಯಿಸುತ್ತಿದ್ದರು. ಈ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ಸದರಿ ಬಸ್ಸ್ ಅನ್ನು ಹಾಗೂ ಬೈಕ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ವಾಹನ ಪರಿಶೀಲನಾ ಪಂಚನಾಮೆಯ ಸಮಯದಲ್ಲಿ

ತೆಗೆದ ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಾಣುವ ಬೈಕ್ ತಾವು ಹೋಗುತ್ತಿದ್ದ ವಾಹನ ಎನ್ನುತ್ತಾರೆ. ಆದ್ದರಿಂದ ಸದರಿ ಭಾವಚಿತ್ರವನ್ನು ನಿಪಿ 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀಮತಿ ಆರ್ ಎಮ್ ಸಿ ವಕೀಲರಿಂದ.

ಆರೋಪಿ 2 ಮತ್ತು ನಾನು ತೇರಗಾಂವದಿಂದ ದಾಂಡೇಲಿಗೆ ಕೆಲಸಕ್ಕೆ ಬೆಳಗ್ಗೆ 08-00 ಗಂಟೆಗೆ ಹೋಗುತ್ತಿದ್ದೇವು. ನೀವು ಬೈಕ್ ನಲ್ಲಿ ಹೋಗುವಾಗ ಹೆಲ್ಮೇಟ್ ಧರಿಸಿದ್ದೀರಾ ಎಂದರೆ ಸಾಕ್ಷಿ ನಾನು ಧರಿಸಿರಲಿಲ್ಲ, ಆರೋಪಿ 2 ರವರು ಧರಿಸಿದ್ದರು. ನಾವು ವಾಹನದಲ್ಲಿ ಬಲ ಭಾಗದಲ್ಲಿ ಹೋಗುತ್ತಿದ್ದೇವು. ಓವರಟೇಕ ಮಾಡುವಾಗ ಸ್ಕಿಡ್ ಆಗಿ ಬಿದ್ದಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ 2 ರವರು ತಮ್ಮ ತಪ್ಪನ್ನು ಒಪ್ಪಿಕೊಂಡು ದಂಡ ಪಾವತಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಘಟನೆಯ ವಿಚಾರವಾಗಿ ಪೊಲೀಸ ಠಾಣೆಯಲ್ಲಿ ಹೇಳಿಕೆ ನೀಡಿದ್ದೀರಾ ಎಂದರೆ ಸಾಕ್ಷಿ ಠಾಣೆಯಲ್ಲಿ ಕೊಟ್ಟಿಲ್ಲ, ಆಸ್ಪತ್ರೆಯಲ್ಲಿ ಕೊಟ್ಟಿದ್ದೇನೆ ಎನ್ನುತ್ತಾರೆ. ನಾನು ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯ ಅಂಶಗಳು ಒಂದೇ ಆಗಿವೆ ಎನ್ನುತ್ತಾರೆ. ಆರೋಪಿ 1 ರವರು ಯಾವುದೇ ತಪ್ಪು ಮಾಡದಿದ್ದರೂ ಸಹ ಪರಿಹಾರ ಹಣ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ತಪ್ಪಿನಿಂದ ಬೈಕ್ ಸ್ಕಿಡ್ ಆಗಿ ಬಿದ್ದು ಅಪಘಾತ ಆಗಿದೆ ಆದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಗೌಂಡಿ ಕೆಲಸಕ್ಕೆ ಆರೋಪಿ 1 ರವರು ನನಗೆ ತನ್ನ ಹಿಂಬದಿಯಲ್ಲಿ ಕೂಡಿಸಿಕೊಂಡು ನಮ್ಮೂರಿನಿಂದ ಹೊರಟು ಹವಗಿಕಡೆಯಿಂದ ಹಳಿಯಾಳ ಕಡೆಗೆ ಹಳಿಯಾಳ ಶಹರದ ಹೊರಗಿನ ಗುತ್ತಿಗೇರಿ ಗಲ್ಲಿ ಹತ್ತಿರ ಮೋಟಾರ ಸೈಕಲ್ ಅನ್ನು ಅತಿ ವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗುತ್ತಿದ್ದ, ನಾನು ನಿಧಾನವಾಗಿ ಚಲಾಯಿಸಲು ಅಂದರು ಸಹ ಕೇಳುತ್ತಿರಲಿಲ್ಲ, ನಮ್ಮ ಪಕ್ಕದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ನಂಬರ ಕೆಎ-25-ಎಫ್-2380 ನೇದ್ದರ ಚಾಲಕನು ಬಸ್ ಅನ್ನು ಹವಗಿ ಕಡೆಯಿಂದ ಹಳಿಯಾಳ ಕಡೆಗೆ ಅತಿ ವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗುತ್ತಿದ್ದನು, ಮಾರುತಿ ಇವನು ಮೋಟಾರ ಸೈಕಲ್ ಅನ್ನು ರಸ್ತೆಯ ಎಡಬದಿಗೆ ತರುಗಿಸಿ ಹಾಗೂ ಬಸ್ ಚಾಲಕನು ಬಸ್ಸನ್ನು ಒಮ್ಮೆಲೇ ರಸ್ತೆಯ ಬಲಬದಿಗೆ ತಿರುಗಿಸಿದ್ದರಿಂದ ಡಿಕ್ಕಿಪಡಿಸಿಕೊಂಡು ಅಪಘಾತಪಡಿಸಿಕೊಂಡರು ಎಂದು ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 3 ಎಂದು, ಅಲ್ಲಗಳೆದ ಭಾಗವನ್ನು ನಿಪಿ 3 ಎ ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.